**ಚಿತ್ರದುರ್ಗದ ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರವರ ನ್ಯಾಯಾಲಯದಲ್ಲಿ**
**ಸ್ಪೆಷಲ್ ಕೇಸ್(ಪಿ.ಸಿ) ಸಂಖ್ಯೆ: 06/2016**

| | | | |
|---|---|---|---|
| **ಸಾಕ್ಷಿದಾರರ ಹೆಸರು** | : | ಮಂಜುನಾಥ ಕೆ. ಗಂಗಲ್ | **ಪಿಡಬ್ಲ್ಯೂ.24** |
| **ತಂದೆಯ ಹೆಸರು** | : | ಕೃಷ್ಣರೆಡ್ಡಿ | **ಸಿಡಬ್ಲ್ಯೂ. 68** |
| **ವಯಸ್ಸು** | : | **54 ವರ್ಷ** | |
| **ಉದ್ಯೋಗ** | : | ಡಿ.ಎಸ್.ಪಿ ದಾವಣಗೆರೆ ಗ್ರಾಮ | **ದಿನಾಂಕ: 26.06.2019** |
| **ವಾಸಸ್ಥಳ** | : | ದಾವಣಗೆರೆ | |

**ಸಾಕ್ಷಿಗೆ ಪ್ರಮಾಣ ವಚನ ಭೋದಿಸಲಾಯಿತು.**

**ಮುಖ್ಯ ವಿಚಾರಣೆ: ವಿಶೇಷ ಸರ್ಕಾರಿ ಅಭಿಯೋಜಕರಿಂದ**

ನಾನು ಅಕ್ಟೋಬರ್ 2013 ರಿಂದ ಜೂನ್ 2015 ರವರೆಗೆ ದಾವಣಗೆರೆ ಲೋಕಾಯುಕ್ತ ಪೋಲಿಸ್ ಠಾಣೆಯಲ್ಲಿ ಪೋಲಿಸ್ ಇನ್ಸ್ ಪೆಕ್ಟರ್ ಆಗಿ ಕರ್ತವ್ಯ ನಿರ್ವಹಿಸಿರುತ್ತೇನೆ.

ದಿ: 03.06.2014 ರಂದು ದಾವಣಗೆರೆ ಲೋಕಾಯುಕ್ತ ಎಸ್.ಪಿ ರವರು ನನಗೆ ದಿ: 04.06.2014 ರ ಬೆಳಗ್ಗೆ ಪೋಲಿಸ್ ಇನ್ಸ್ ಪೆಕ್ಟರ್ ಲೋಕಾಯುಕ್ತ ಚಿತ್ರದುರ್ಗದವರ ಬಳಿ ವರದಿ ಮಾಡಿಕೊಳ್ಳುವಂತೆ ತಿಳಿಸಿದ ಮೇರೆಗೆ ನಾನು ದಿ: 04.06.2014 ರಂದು ಬೆಳಗ್ಗೆ 3.30 ಕ್ಕೆ ಚಾಸಾ 72 ಕೆ.ಸತ್ಯನಾರಾಯಣರವರ ಮುಂದೆ ವರದಿ ಮಾಡಿಕೊಂಡೆನು. ಸದರಿ ತಮ್ಮ ಠಾಣಾ ಮೊಕದ್ದಮೆ ಸಂಖ್ಯೆ 5/2014 ಕ್ಕೆ ಸಂಬಂಧಿಸಿದಂತೆ ಎರಡು ಶೋಧನಾ ವಾರಂಟ್ ಗಳನ್ನು ನನಗೆ ಕೊಟ್ಟಿದ್ದು, ಅವು ಹಿರಿಯೂರು ತಾಲ್ಲೂಕಿನ ಈಶ್ವರಗೆರೆ ಗ್ರಾಮದಲ್ಲಿರುವ ಆರೋಪಿಯ ಅಧಿಕಾರಿಯ ಸಹೋದರರಾದ ಈರಣ್ಣ ಮತ್ತು ರಾಮಣ್ಣ ಇವರ ಮನೆಗಳನ್ನು ಶೋಧನೆ ಮಾಡುವಂತೆ ಸದರಿ ಪ್ರಕರಣಕ್ಕೆ ಸಂಬಂಧಿಸಿದಂತೆ ಆರೋಪಿಯ ಅಧಿಕಾರಿಗೆ ಸಂಬಂಧಪಟ್ಟಂತ ನಗದು ಹಣ ಮತ್ತು ವಸ್ತು ಅಥವಾ ದಾಖಲೆ ಇದ್ದಲ್ಲಿ ವಶಪಡಿಸಿಕೊಂಡು ಬರುವಂತೆ ಇತ್ತು. ಅದೇ ದಿವಸ ಅವರ ಕಛೇರಿಯಲ್ಲಿ ಇದ್ದಂತಹ ಇಬ್ಬರು ಪಂಚರಾದ ಚಾಸಾ 6 ಶ್ರೀಮತಿ. ಟಿ.ಎಸ್. ವಾಣಿ ಮತ್ತು

ಚಾಸಾ 7 ಮಂಜುನಾಥ ರೆಡ್ಡಿ ಇವರನ್ನು ನನಗೆ ಪರಿಚಯ ಮಾಡಿಸಿದರು ಮತ್ತು ನನ್ನೊಂದಿಗೆ ಹೋಗಿ ನಾನು ನಡೆಸುವ ನಡಾವಳಿಗೆ ಪಂಚರಾಗಿ ಸಹಕರಿಸಲು ಅವರಿಗೆ ತಿಳಿಸಿದರು. ನಾನು ಸದರಿ ಪಂಚರನ್ನು ಪರಿಚಯ ಮಾಡಿಕೊಂಡು ಕೇಸಿನ ವಿದ್ಯಾಮಾನಗಳನ್ನು ಅವರಿಗೆ ತಿಳಿಸಿದೆನು. ಅವರು ಪಂಚರಾಗಲು ಒಪ್ಪಿಕೊಂಡ ಮೇರೆಗೆ ನಾನು ಮತ್ತು ಪಂಚರು ಹಾಗೂ ಸಿಬ್ಬಂದಿಯವರು ನಮ್ಮ ಇಲಾಖಾ ಜೀಪಿನಲ್ಲಿ ಚಿತ್ರದುರ್ಗದಿಂದ ಬೆಳಗ್ಗೆ 5.00 ಗಂಟೆಗೆ ಹೊರಟು ಬೆಳಗ್ಗೆ 6.00 ಗಂಟೆಗೆ ಈಶ್ವರಗೆರೆ ಗ್ರಾಮಕ್ಕೆ ಹೋಗಿ ಒಂದನೇ ಆರೋಪಿ ಸಹೋದರನಾದ ಈರಣ್ಣ ಇವರ ಮನೆಗೆ ಹೋದೆವು. ಸದರಿ ಈರಣ್ಣ ರವರು ತಮ್ಮ ಮನೆಯ ಮುಂದೆ ಇದ್ದು ಅವರಿಗೆ ನಮ್ಮ ಪರಿಚಯ ಮಾಡಿಕೊಂಡು ನ್ಯಾಯಾಲಯದ ಶೋಧನಾ ವಾರಂಟ್ ಪಡೆದಿದ್ದ ಬಗ್ಗೆ ತಿಳಿಸಿ ಮತ್ತು ತಮ್ಮ ಸಹೋದರನಾದ ಒಂದನೇ ಆರೋಪಿಯ ವಿರುದ್ದ ಚಿತ್ರದುರ್ಗ ಲೋಕಾಯುಕ್ತ ಪೋಲಿಸ್ ಠಾಣೆಯಲ್ಲಿ ಪ್ರಕರಣ ದಾಖಲಾದ ಬಗ್ಗೆ ತಿಳಿಸಿದೆನು. ಅವರ ಮನೆಯನ್ನು ಶೋಧನೆ ಮಾಡುವ ವಾರಂಟ್ ಇದ್ದುದ್ದನ್ನು ತೋರಿಸಿ ಆತನಿಗೆ ಇಂಗ್ಲಿಷ್ ಬಾರದೇ ಇದ್ದುದರಿಂದ ಸದರಿ ವಾರಂಟ್ ನಲ್ಲಿರುವ ಅಂಶಗಳನ್ನು ಕನ್ನಡದಲ್ಲಿ ತಿಳಿಸಿದೆನು. ಅದಕ್ಕೆ ಅವರು ಒಪ್ಪಿಗೆ ಕೊಟ್ಟರು. ಈ ಕುರಿತು ವಾರಂಟ್ ಮೇಲೆ ಅವರ ರುಜು ಪಡೆದೆನು. ಸದರಿ ವಾರಂಟ್ ಈಗ ನೋಡುತ್ತಿದ್ದು ಗುರುತಿಸುತ್ತೇನೆ. ಅದು ಈಗಾಗಲೇ ನಿಪಿ 4 ಆಗಿದೆ. ಅದಕ್ಕೆ ವೀರಣ್ಣರವರು ಸಹಿ ಮಾಡಿರುತ್ತಾರೆ ಅವರ ಸಹಿಯನ್ನು ಗುರುತಿಸುತ್ತೇನೆ. ಅದನ್ನು ನಿಪಿ 4(ಸಿ) ಅಂತ ಗುರುತಿಸಲಾಯಿತು. ಇಬ್ಬರು ಪಂಚರು ಸಹಿ ಮಾಡಿದ್ದಾರೆ. ನಾನು ಸಹಿ ಮಾಡಿದ್ದೇನೆ. ಸಾಕ್ಷಿ ಸಹಿಯನ್ನು ನಿಪಿ 4(ಸಿ) ಅಂತ ಗುರುತಿಸಲಾಯಿತು.

2. ಮನೆಯ ಶೋಧನೆ ಮಾಡುವ ಪೂರ್ವದಲ್ಲಿ ಪಂಚರ ಸಮಕ್ಷಮ ನಮ್ಮ ಅಂಗ ಜಪ್ತಿಯನ್ನು ಈರಣ್ಣನವರಿಗೆ ಒಪ್ಪಿಸಿದೆವು. ಅದರಂತೆ ನಮ್ಮ ಅಂಗ ಜಪ್ತಿಯನ್ನು ಮಾಡಿಕೊಂಡೆವು. ಸದರಿ ಮನೆಯ ಮುಂಬಾಗಿಲು ಪೂರ್ವ ದಿಕ್ಕಿಗೆ ಇದ್ದು, ಮನೆಯಲ್ಲಿ ಲಿವಿಂಗ್ ರೂಂ, ಅಡಿಗೆ ಮನೆ, ಮಲಗುವ ಕೋಣೆ, ಟಿ.ವಿ. ಹಾಲ್ ಮುಂತಾದ ಕಡೆಗಳಲ್ಲಿ ಒಂದನೇ ಆರೋಪಿಗೆ ಸಂಬಂಧಿಸಿದಂತ

ದಾಖಲಾತಿಗಳನ್ನು ಹುಡುಕಾಡಿದೆವು. ಆದರೆ ಒಂದನೇ ಆರೋಪಿಗೆ ಸಂಬಂಧಿಸಿದಂತ ಬೆಲೆಬಾಳುವ ವಸ್ತುಗಳು ಮತ್ತು ದಾಖಲೆಗಳು ಯಾವುದೂ ಸಿಕ್ಕಿರುವುದಿಲ್ಲ. ಈ ಬಗ್ಗೆ ಈರಣ್ಣನವರನ್ನು ವಿಚಾರಿಸಲಾಗಿ ಆತನು ತಾನು ಕಳೆದ 20 ವರ್ಷಗಳಿಂದ ಒಂದನೇ ಆರೋಪಿಯಿಂದ ಬೇರೆ ವಾಸವಾಗಿರುವುದಾಗಿ ತಿಳಿಸಿದನು. ಈ ಬಗ್ಗೆ ಬೆಳಗ್ಗೆ 6.15 ರಿಂದ 7.45 ರವರೆಗೆ ಪಂಚನಾಮೆಯ ನಡಾವಳಿಯನ್ನು ನಾವು ತೆಗೆದುಕೊಂಡು ಹೋದ ಲ್ಯಾಪ್ ಟಾಪ್ ನಲ್ಲಿ ಸಿಬ್ಬಂದಿಯವರ ಸಹಾಯದಿಂದ ಜರುಗಿಸಿದೆನು. ಸದರಿ ಮಹಜರ್ ಗೆ ಪಂಚರು ಮತ್ತು ಈರಣ್ಣ ಹಾಗೂ ನನ್ನ ಸಿಬ್ಬಂದಿಯವರ ಸಹಿ ಹಾಕಿಸಿ ನಾನು ಸಹಿ ಮಾಡಿದೆನು. ಸದರಿ ಪಂಚನಾಮೆ ಈಗ ನೋಡುತ್ತಿದ್ದು ಅದರಲ್ಲಿ ಪಂಚರ ಸಹಿಗಳು ಇವೆ. ಈರಣ್ಣನ ಸಹಿ ಇದೆ. ನನ್ನ ಮತ್ತು ನನ್ನ ಸಿಬ್ಬಂದಿಯ ಸಹಿ ಇದೆ. ಸದರಿ ಪಂಚನಾಮೆ ಈಗಾಗಲೇ ನಿಪಿ 5 ಆಗಿದ್ದು ಸಾಕ್ಷಿ ಸಹಿ ನಿಪಿ 5(ಸಿ) ಅಂತ ಗುರುತಿಸಲಾಯಿತು.

3. ಅಲ್ಲಿಂದ ನಾನು, ಪಂಚರು ಮತ್ತು ಸಿಬ್ಬಂದಿಯವರು ಒಂದನೇ ಆರೋಪಿಯ ಇನ್ನೊಬ್ಬ ಸಹೋದರನಾದ ಡಿ ರಾಮಣ್ಣನವರ ಮನೆ ಹುಡುಕಿಕೊಂಡು ಬಂದಾಗ ಸದರಿ ರಾಮಣ್ಣ ತನ್ನ ಮನೆಯ ಮುಂಭಾಗ ಇದ್ದು ಸದರಿಯವರಿಗೆ ನಾವು ಬಂದ ವಿಚಾರವನ್ನು ತಿಳಿಸಿದೆವು. ಘನ ನ್ಯಾಯಾಲಯ ಹೊರಡಿಸಿದ ಶೋಧನಾ ವಾರಂಟ್ ನ ಮಾಹಿತಿಯನ್ನು ತಿಳಿಸಿದೆವು. ಅತನ ಸಹೋದರನಾದ ಒಂದನೇ ಆರೋಪಿ ವಿರುದ್ಧ ಚಿತ್ರದುರ್ಗ ಲೋಕಾಯುಕ್ತ ಪೋಲಿಸ್ ಠಾಣೆಯಲ್ಲಿ ಪ್ರಕರಣ ದಾಖಲಾದ ಬಗ್ಗೆ ಮಾಹಿತಿ ನೀಡಿದೆ. ವಾರಂಟ್ ನಲ್ಲಿದ್ದ ಇಂಗ್ಲಿಷ್ ಆತನಿಗೆ ಗೊತ್ತಾಗದೆ ಇರುವುದರಿಂದ ಕನ್ನಡದಲ್ಲಿ ತರ್ಜುಮೆ ಮಾಡಿ ತಿಳಿಸಿದಾಗ ಆತನು ತನ್ನ ಶೋಧನೆ ಮಾಡಬಹುದಾಗಿದೆ ಅಂತ ಒಪ್ಪಿಗೆ ನೀಡಿದ್ದರಿಂದ ಆತನಿಗೆ ಅದನ್ನು ಜಾರಿ ಮಾಡಿದೆನು. ಸದರಿ ವಾರಂಟ್ ಗೆ ರಾಮಣ್ಣ, ಪಂಚರು, ಸಿಬ್ಬಂದಿ ಸಹಿಪಡೆದು ನಾನು ಸಹಿ ಮಾಡಿದೆ. ಸದರಿ ಸರ್ಚ್ ವಾರಂಟ್ ಈಗ ನೋಡುತ್ತಿದ್ದು ಅದು ಈಗಾಗಲೇ ನಿಪಿ 6 ಆಗಿದ್ದು ಸಾಕ್ಷಿ ಸಹಿಯನ್ನು ನಿಪಿ 6(ಸಿ) ಅಂತ ಗುರುತಿಸಲಾಯಿತು. ರಾಮಣ್ಣರವರಿಗೆ ನಮ್ಮ ಪಂಚರ, ಮತ್ತು ಸಿಬ್ಬಂದಿಯವರ

ಅಂಗ ಜಪ್ತಿಯನ್ನು ಒಪ್ಪಿಸಿದೆವು. ಮನೆಯ ಒಳಗಡೆ ಪ್ರವೇಶಿಸಲಾಗಿ ಮನೆಯು ಉತ್ತರಾಭಿಮುಖವಾಗಿದ್ದು ಸದರಿ ಮನೆಯಲ್ಲಿ ಇದ್ದ ಟಿ.ವಿ ಹಾಲ್ ನ ಉತ್ತರ ದಿಕ್ಕಿಗೆ ಇರುವ ಅಲಮೇರಾ, ಈ ಬಗ್ಗೆ ರಾಮಣ್ಣನನ್ನು ಕೇಳಲಾಗಿ ಸದರಿ ಅಲಮೇರ ನನ್ನ ಸಹೋದರನಾದ ಒಂದನೇ ಆರೋಪಿಗೆ ಸೇರಿದ್ದಾಗಿ ತಿಳಿಸಿದ್ದಾಗಿ ಅದರ ಬೀಗದ ಕೈ ತನ್ನ ಬಳಿ ಇರುವುದಿಲ್ಲ ಅಂತ ತಿಳಿಸಿದನು.

4. ಸದರಿ ಅಲಮೇರಾ ತೆರೆಯುವ ಕುರಿತು ಕಂಬಾರ ದಾಸಣ್ಣರವರನ್ನು ಕರೆಸಿ ಸದರಿ ಅಲಮೇರಾವನ್ನು ತೆರೆಸಲಾಯಿತು. ಸದರಿ ಅಲಮೇರಾವನ್ನು ಪರಿಶೀಲಿಸಲಾಗಿ ಅದರಲ್ಲಿ 13 ದಾಖಲೆಗಳು ಇದ್ದವು.

ಅ) ಬೆಸ್ಕಾಂ ಚಿತ್ರದುರ್ಗ ಇವರು ದಿ: 03.08.2013 ರಂದು ಸ್ಥಾವರ ಸಂಖ್ಯೆ ಟಿಪಿ 5509 ಕ್ಕೆ ಸಂಬಂಧಿಸಿದ ನೋಟಿಸ್ ಆಗಿದ್ದು ಅದು ಎರಡನೇ ಆರೋಪಿಯಾದ ಬಿ.ಎಸ್. ರಾಜೇಶ್ವರಿಯವರಿಗೆ ಸಂಬಂಧ ಪಟ್ಟಿದ್ದು. ಸದರಿ ದಾಖಲೆ ಈಗ ನೋಡುತ್ತಿದ್ದು ಗುರುತಿಸುತ್ತೇನೆ. ಅದನ್ನು ಈಗ ನೋಡುತ್ತಿದ್ದು ಗುರುತಿಸುತ್ತೇನೆ. ಸದರಿ ದಾಖಲೆಯನ್ನು ನಿಪಿ 50 ಅಂತ ಗುರುತಿಸಲಾಯಿತು. ಅದರ ಮೇಲೆ ನನ್ನ ಮತ್ತು ಪಂಚರ ಸಹಿಗಳು ಇವೆ. ಸಾಕ್ಷಿ ಸಹಿಯನ್ನು ನಿಪಿ 50( ಎ) ಅಂತ ಗುರುತಿಸಲಾಯಿತು.

ಆ) ದಿ: 03.01.2013 ರ ತಾರೀಖು ಬರೆದ ಸುಗ್ಗಿ ಟ್ರೇಡರ್ ಇವರ ಇನ್ ವಾಯ್ಸ್ ಸಂಖೆ: 1130 ಇದು ಕೃಷಿ ರಾಸಾಯನಿಕ ವಸ್ತುಗಳನ್ನು ಒಂದನೇ ಆರೋಪಿ ಖರೀದಿಸಿದ್ದ ರೂ. 7195=10 ಇನ್ ವಾಯಸ್ ಆಗಿದ್ದು ಅದಕ್ಕೆ ನಾನು ಮತ್ತು ಪಂಚರು ಸಹಿ ಮಾಡಿದ್ದೆವು. ಅದನ್ನು ಈಗ ನೋಡುತ್ತಿದ್ದು ಗುರುತಿಸುತ್ತೇನೆ. ಸದರಿ ದಾಖಲೆಯನ್ನು ನಿಪಿ 51 ಅಂತ ಗುರುತಿಸಲಾಯಿತು. ಅದರ ಮೇಲೆ ನನ್ನ ಮತ್ತು ಪಂಚರ ಸಹಿಗಳು ಇವೆ. ಸಾಕ್ಷಿ ಸಹಿಯನ್ನು ನಿಪಿ 51(ಎ) ಅಂತ ಗುರುತಿಸಲಾಯಿತು.

ಇ) ದಿ: 03.04.2010 ಎಂದು ಬರೆದ ಓಂ ಶಕ್ತಿ ಎಂಟರ್ ಪ್ರೈಸಸ್ ಬೆಂಗಳೂರು ಇವರ ಸಬ್ ಮರ್ಸಿಬಲ್ ಪಂಪ್ ಸೆಟ್ ಸಲುವಾಗಿ ನೀಡಿದ ಕೊಟೇಷನ್ ರೂ. 18250 ಅಂತ ಬರೆದ ಚೀಟಿಯಾಗಿದ್ದು ಅದನ್ನು ಜಪ್ತಿ

ಮಾಡಿಕೊಂಡಿದ್ದು ಅದಕ್ಕೆ ಪಂಚರು ಮತ್ತು ನಾನು ಸಹಿ ಮಾಡಿರುತ್ತೇವೆ. ಅದನ್ನು ಈಗ ನೋಡುತ್ತಿದ್ದು ಗುರುತಿಸುತ್ತೇನೆ. ಸದರಿ ದಾಖಲೆಯನ್ನು ನಿಪಿ 52 ಅಂತ ಗುರುತಿಸಲಾಯಿತು. ಅದರ ಮೇಲೆ ನನ್ನ ಮತ್ತು ಪಂಚರ ಸಹಿಗಳು ಇವೆ. ಸಾಕ್ಷಿ ಸಹಿಯನ್ನು ನಿಪಿ 52(ಎ) ಅಂತ ಗುರುತಿಸಲಾಯಿತು.

ಈ) ನ್ಯಾಷನಲ್ ಇನ್ಸೂರೆನ್ಸ್ ಕಂ. ಚಿತ್ರದುರ್ಗ ಇವರು ಕೆ.ಎ. 16/ಡಬ್ಲ್ಯೂ 8697 ಮೋಟಾರ್ ಸೈಕಲ್ ಗೆ ಇನ್ಸೂರೆನ್ಸ್ ಸಂಬಂಧ ಹೊರಡಿಸಿದ ರಿನಿವಲ್ ನೋಟಿಸ್ ಅನ್ನು ಸಹಿತ ಪಂಚರು ಮತ್ತು ನಾನು ಸಹಿ ಮಾಡಿ ಜಪ್ತಿ ಮಾಡಿಕೊಂಡೆವು. ಅದನ್ನು ಈಗ ನೋಡುತ್ತಿದ್ದು ಗುರುತಿಸುತ್ತೇನೆ. ಸದರಿ ದಾಖಲೆಯನ್ನು ನಿಪಿ 53 ಅಂತ ಗುರುತಿಸಲಾಯಿತು. ಅದರ ಮೇಲೆ ನನ್ನ ಮತ್ತು ಪಂಚರ ಸಹಿಗಳು ಇವೆ. ಸಾಕ್ಷಿ ಸಹಿಯನ್ನು ನಿಪಿ 53(ಎ) ಅಂತ ಗುರುತಿಸಲಾಯಿತು.

ಉ) ನ್ಯಾಷನಲ್ ಇನ್ಸೂರೆನ್ಸ್ ಕಂ. ಚಿತ್ರದುರ್ಗವರು ಕೆ.ಎ. 02/ಇಡಿ 8896 ಮೋಟಾರ್ ಸೈಕಲ್ ಗೆ ಸಂಬಂಧಿಸಿದ ಪಾಲಿಸಿರಿನಿವಲ್ ನೋಟಿಸ್ ಅನ್ನು ಸಹಿತ ಪಂಚರು ಮತ್ತು ನಾನು ಸಹಿ ಮಾಡಿ ಜಪ್ತಿ ಮಾಡಿಕೊಂಡೆವು. ಅದನ್ನು ಈಗ ನೋಡುತ್ತಿದ್ದು ಗುರುತಿಸುತ್ತೇನೆ. ಸದರಿ ದಾಖಲೆಯನ್ನು ನಿಪಿ 54 ಅಂತ ಗುರುತಿಸಲಾಯಿತು. ಅದರ ಮೇಲೆ ನನ್ನ ಮತ್ತು ಪಂಚರ ಸಹಿಗಳು ಇವೆ. ಸಾಕ್ಷಿ ಸಹಿಯನ್ನು ನಿಪಿ 54(ಎ) ಅಂತ ಗುರುತಿಸಲಾಯಿತು.

ಊ) ದಿ: 20.11.2011 ರಂದು ಬರೆದ ಶ್ರೀ. ಭಗವತಿ ಬೋರ್ ವೆಲ್ಸ್ ಹಿರಿಯೂರು ಇವರು ಒಂದನೇ ಆರೋಪಿತ ರಾಜಣ್ಣ ಇವರ ಹೆಸರಿಗೆ ಬೋರ್ ವೆಲ್ ಕೊರೆದ ಬಗ್ಗೆ ಕ್ಯಾಷ್ ಬಿಲ್ ನಂ. 90 ಇದರಲ್ಲಿ ರೂ. 41400 ಅಂತ ಬರೆದಿದ್ದು ಸದರಿ ಬಿಲ್ ಅನ್ನು ತೆಗೆದುಕೊಂಡು ಅದಕ್ಕೆ ನಾನು ಪಂಚರು ಸಹಿ ಮಾಡಿದೆವು. ಅದನ್ನು ಈಗ ನೋಡುತ್ತಿದ್ದು ಗುರುತಿಸುತ್ತೇನೆ. ಸದರಿ ದಾಖಲೆಯನ್ನು ನಿಪಿ 55 ಅಂತ ಗುರುತಿಸಲಾಯಿತು. ಅದರ ಮೇಲೆ ನನ್ನ ಮತ್ತು ಪಂಚರ ಸಹಿಗಳು ಇವೆ. ಸಾಕ್ಷಿ ಸಹಿಯನ್ನು ನಿಪಿ 55(ಎ) ಅಂತ ಗುರುತಿಸಲಾಯಿತು.

ಋ) ದಿ: 20.05.2011 ಅಂತ ಬರೆದ ಶ್ರೀಮತಿ ರಾಜೇಶ್ವರಿ ಅಂದರೆ ಎರಡನೇ ಆರೋಪಿಗೆ ಇವರಿಗೆ ಹುಂಡಾಯ್ ಐ 20 ಕಾರಿಗೆ ಚೋಳಮಂಡಲಮ್ ಇನ್ಸೂರೆನ್ಸ್ ಕಂಪನಿಯಿಂದ ನೀಡಿದ ಕವರ್ ನೋಟ್ ನಂ. 8385916 ಇದರಲ್ಲಿ ರೂ. 19477 ಪಾವತಿಸಿದ ಬಗ್ಗೆ ಜೆರಾಕ್ಸ್ ಪ್ರತಿಗಳನ್ನು ಪಡೆದು ಪಂಚರ ಸಮಕ್ಷಮ ಅಮಾನತ್ತುಪಡಿಸಿಕೊಂಡೆ. ಅದನ್ನು ಈಗ ನೋಡುತ್ತಿದ್ದು ಗುರುತಿಸುತ್ತೇನೆ. ಸದರಿ ದಾಖಲೆಯನ್ನು ನಿಪಿ 56 ಅಂತ ಗುರುತಿಸಲಾಯಿತು. ಅದರ ಮೇಲೆ ನನ್ನ ಮತ್ತು ಪಂಚರ ಸಹಿಗಳು ಇವೆ. ಸಾಕ್ಷಿ ಸಹಿಯನ್ನು ನಿಪಿ 56(ಎ) ಅಂತ ಗುರುತಿಸಲಾಯಿತು.

ಎ) ದಿ: 13.08.2013 ಅಂತ ಬರೆದ ಮಹೇಶ್ ಮೋಟಾರ್ಸ್ ಹಿರಿಯೂರು ಇವರು ಕೆ.ಎ 02/ಇಡಿ 8896 ಇಂಜಿನ್ ಆಯಿಲ್ ಹಾಕಿಸಿದ ಬಗ್ಗೆ ರಸೀದಿ ಸಂ. 23917 ಇರುವ ರೂ. 220 ಗಳನ್ನು ಪಾವತಿಸಿದ ಬಗ್ಗೆ ರಸೀದಿಯನ್ನು ಪಂಚರ ಸಹಿ ಪಡೆದು ಮತ್ತು ನಅನು ಸಹಿ ಮಾಡಿ ಅಮಾನತ್ತುಪಡಿಸಿಕೊಂಡೆ. ಅದನ್ನು ಈಗ ನೋಡುತ್ತಿದ್ದು ಗುರುತಿಸುತ್ತೇನೆ. ಸದರಿ ದಾಖಲೆಯನ್ನು ನಿಪಿ 57 ಅಂತ ಗುರುತಿಸಲಾಯಿತು. ಅದರ ಮೇಲೆ ನನ್ನ ಮತ್ತು ಪಂಚರ ಸಹಿಗಳು ಇವೆ. ಸಾಕ್ಷಿ ಸಹಿಯನ್ನು ನಿಪಿ 57(ಎ) ಅಂತ ಗುರುತಿಸಲಾಯಿತು.

ಏ) ದಿ: 13.08.2013 ಅಂತ ಬರೆದ ಮಹೇಶ ಮೋಟಾರ್ಸ್ ಹಿರಿಯೂರು ಇವರಲ್ಲಿ ಮೋಟಾರ್ ಸೈಕಲ್ ಸಂ. ಕೆ.ಎ. 02/ಇಡಿ 8896 ಅಂತ ಬರೆದ ವಾಹನದ ಸರ್ವಿಸ್ ಮತ್ತು ಬ್ಯಾಟರಿ ಚಾರ್ಜ್ ಮಾಡಿದ ಬಗ್ಗೆ ರಸೀದಿ ನಂ. 17540 ರಸೀದಿಯಾಗಿದ್ದು ಅದರಲ್ಲಿ ರೂ. 190 ಪಾವತಿಸಿದ ಬಗ್ಗೆ ರಸೀದಿಯನ್ನು ಪಂಚರ ಸಹಿ ಪಡೆದು ಮತ್ತು ನಅನು ಸಹಿ ಮಾಡಿ ಅಮಾನತ್ತುಪಡಿಸಿಕೊಂಡೆ. ಅದನ್ನು ಈಗ ನೋಡುತ್ತಿದ್ದು ಗುರುತಿಸುತ್ತೇನೆ. ಸದರಿ ದಾಖಲೆಯನ್ನು ನಿಪಿ 58 ಅಂತ ಗುರುತಿಸಲಾಯಿತು. ಅದರ ಮೇಲೆ ನನ್ನ ಮತ್ತು ಪಂಚರ ಸಹಿಗಳು ಇವೆ. ಸಾಕ್ಷಿ ಸಹಿಯನ್ನು ನಿಪಿ 58(ಎ) ಅಂತ ಗುರುತಿಸಲಾಯಿತು.

ಐ) ದಿ: 05.04.2013 ಅಂತ ಬರೆದ ಮಹೇಶ ಮೋಟಾರ್ಸ್ ಹಿರಿಯೂರು ಇವರಲ್ಲಿ ಮೋಟಾರ್ ಸೈಕಲ್ ಸಂ. ಕೆ.ಎ. 02/ಇಡಿ 8896 ಅಂತ ಬರೆದ ವಾಹನದ

ರೆಗುಲರ್ ಸರ್ವಿಸ್ ಮಾಡಿದ ಬಗ್ಗೆ ರಸೀದಿ ನಂ. 15647 ರಸೀದಿಯಾಗಿದ್ದು ಅದರಲ್ಲಿ ರೂ. 160 ಪಾವತಿಸಿದ ಬಗ್ಗೆ ರಸೀದಿಯನ್ನು ಪಂಚರ ಸಹಿ ಪಡೆದು ಮತ್ತು ನಅನು ಸಹಿ ಮಾಡಿ ಅಮಾನತ್ತುಪಡಿಸಿಕೊಂಡೆ. ಅದನ್ನು ಈಗ ನೋಡುತ್ತಿದ್ದು ಗುರುತಿಸುತ್ತೇನೆ. ಸದರಿ ದಾಖಲೆಯನ್ನು ನಿಪಿ 59 ಅಂತ ಗುರುತಿಸಲಾಯಿತು. ಅದರ ಮೇಲೆ ನನ್ನ ಮತ್ತು ಪಂಚರ ಸಹಿಗಳು ಇವೆ. ಸಾಕ್ಷಿ ಸಹಿಯನ್ನು ನಿಪಿ 59(ಎ) ಅಂತ ಗುರುತಿಸಲಾಯಿತು.

ಒ) ದಿ: 05.04.2013 ಅಂತ ಬರೆದ ಮಹೇಶ ಮೋಟಾರ್ಸ್ ಹಿರಿಯೂರು ಇವರಲ್ಲಿ ಮೋಟಾರ್ ಸೈಕಲ್ ಸಂ. ಕೆ.ಎ. 16/ಯು 8626 ಅಂತ ಬರೆದ ವಾಹನದ ಇಂಜಿನ್ ಆಯಿಲ್ ಖರೀದಿ ಮಾಡಿದ ಬಗ್ಗೆ ರಸೀದಿ ನಂ. 20579 ರಸೀದಿಯಾಗಿದ್ದು ಅದರಲ್ಲಿ ರೂ. 220 ಪಾವತಿಸಿದ ಬಗ್ಗೆ ರಸೀದಿಯನ್ನು ಪಂಚರ ಸಹಿ ಪಡೆದು ಮತ್ತು ನಅನು ಸಹಿ ಮಾಡಿ ಅಮಾನತ್ತುಪಡಿಸಿಕೊಂಡೆ. ಅದನ್ನು ಈಗ ನೋಡುತ್ತಿದ್ದು ಗುರುತಿಸುತ್ತೇನೆ. ಸದರಿ ದಾಖಲೆಯನ್ನು ನಿಪಿ 60 ಅಂತ ಗುರುತಿಸಲಾಯಿತು. ಅದರ ಮೇಲೆ ನನ್ನ ಮತ್ತು ಪಂಚರ ಸಹಿಗಳು ಇವೆ. ಸಾಕ್ಷಿ ಸಹಿಯನ್ನು ನಿಪಿ 60(ಎ) ಅಂತ ಗುರುತಿಸಲಾಯಿತು.

ಓ) ದಿ: 31.12.2009 ಅಂತ ಬರೆದ ನಾಗಮ್ಮ ಇವರ ಲೋನ್ ಖಾತೆ ಸಂಖ್ಯೆ 177 ಕ್ಕೆ ಹಿರಿಯೂರು ಪ್ರಗತಿ ಗ್ರಾಮೀಣ ಬ್ಯಾಂಕಿನಲ್ಲಿ ರೂ 92000 ಪಾವತಿ ಮಾಡಿದ ಬಗ್ಗೆ ಇರುವ ಚಲನ್ ಪಡೆದು ಪಂಚರ ಸಹಿ ಪಡೆದು ಮತ್ತು ನಅನು ಸಹಿ ಮಾಡಿ ಅಮಾನತ್ತುಪಡಿಸಿಕೊಂಡೆ. ಅದನ್ನು ಈಗ ನೋಡುತ್ತಿದ್ದು ಗುರುತಿಸುತ್ತೇನೆ. ಸದರಿ ದಾಖಲೆಯನ್ನು ನಿಪಿ 61 ಅಂತ ಗುರುತಿಸಲಾಯಿತು. ಅದರ ಮೇಲೆ ನನ್ನ ಮತ್ತು ಪಂಚರ ಸಹಿಗಳು ಇವೆ. ಸಾಕ್ಷಿ ಸಹಿಯನ್ನು ನಿಪಿ 61(ಎ) ಅಂತ ಗುರುತಿಸಲಾಯಿತು.

ಔ) ಸ್ಮೃತಿ ಜೆ.ಪಿ.ಎನ್ ಒಂದನೇ ಕ್ರಾಸ್, ಶಿವಮೊಗ್ಗ, ನಾಗಮ್ಮ ಅಂದರೆ ಒಂದನೇ ಆರೋಪಿ ತಾಯಿ ಇವರನ್ನು ತಪಾಸಣೆಗೆ ಒಳಪಡಿಸಿದಾಗ ವೈದ್ಯಕೀಯ ತಪಾಸಣಾ ವರದಿ ಸಿಕ್ಕಿದ್ದು ಅದು ಒಟ್ಟು ಐದು ಪುಟಗಳನ್ನು ಹೊಂದಿದ್ದು ಅವುಗಳ

ಮೇಲೆ ಪಂಚರ ಸಹಿ ಪಡೆದು ನಾನು ಸಹಿ ಮಾಡಿ ಜಪ್ತಿ ಮಾಡಿಕೊಂಡೆನು. ಅದನ್ನು ಈಗ ನೋಡುತ್ತಿದ್ದು ಗುರುತಿಸುತ್ತೇನೆ. ಸದರಿ ದಾಖಲೆಯನ್ನು ನಿಪಿ 62 ಅಂತ ಗುರುತಿಸಲಾಯಿತು. ಅದರ ಮೇಲೆ ನನ್ನ ಮತ್ತು ಪಂಚರ ಸಹಿಗಳು ಇವೆ. ಸಾಕ್ಷಿ ಸಹಿಯನ್ನು ನಿಪಿ 62(ಎ) ಅಂತ ಗುರುತಿಸಲಾಯಿತು. ಪ್ರತಿ ಪುಟದ ಮೇಲೆ ನನ್ನ ಮತ್ತು ಪಂಚರ ಸಹಿ ಇದೆ.

5. ಸದರಿ ರಾಮಣ್ಣ ರವರಿಗೆ ನಮ್ಮ ಶೋಧನೆ ಮುಕ್ತಾಯಗೊಂಡಿದ್ದರಿಂದ ನಮ್ಮ ಅಂಗ ಜಪ್ತಿಯನ್ನು ಒಪ್ಪಿಸಿ ಆ ಬಗ್ಗೆ ಸ್ಥಳದಲ್ಲಿ ಬೆಳಗ್ಗೆ 8.15 ರಿಂದ 11.00 ಗಂಟೆಯವರೆಗೆ ಲ್ಯಾಪ್ ಟಾಪ್ ನಲ್ಲಿ ಸಿಬ್ಬಂದಿಯವರ ಸಹಾಯದಿಂದ ಪಂಚನಾಮೆ ಕ್ರಮ ಜರುಗಿಸಿದ್ದು ಸದರಿ ಪಂಚನಾಮೆಗೆ ಪಂಚರು, ನಾನು ಮತ್ತು ಮನೆಯ ಮಾಲೀಕನಾದ ರಾಮಣ್ಣ ಸಹಿ ಮಾಡಿದೆವು. ಸದರಿ ಪಂಚನಾಮೆಯ ನಕಲನ್ನು ರಾಮಣ್ಣನವರಿಗೆ ನೀಡಿದೆ. ಸದರ ಪಂಚನಾಮೆಯನ್ನು ಈಗ ನೋಡುತ್ತಿದ್ದೇನೆ. ಅದು ಈಗಾಗಲೇ ನಿಪಿ 7 ಆಗಿದ್ದು ಸಾಕ್ಷಿ ಸಹಿಯನ್ನು ನಿಪಿ 7(ಸಿ) ಅಂತ ಗುರುತಿಸಲಾಯಿತು. ರಾಮಣ್ಣ ನ ಸಹಿ ಗುರುತಿಸುತ್ತೇನೆ. ಅದನ್ನು ನಿಪಿ 7(ಡಿ) ಅಂತ ಗುರುತಿಸಲಾಯಿತು.

6. ನಾನು, ಸಿಬ್ಬಂದಿ ಮತ್ತು ಪಂಚರು ಚಿತ್ರದುರ್ಗಕ್ಕೆ ವಾಪಸ್ ಬಂದು ನಾನು ನಡೆಸಿದ ಮಹಜರ್ ಮತ್ತು ಜಾರಿ ಮಾಡಿದ ಶೋಧನಾ ವಾರಂಟ್ ಮತ್ತು ಜಪ್ತಿ ಮಾಡಿದ ದಾಖಲೆಗಳನ್ನು ಪ್ರಕರಣದ ತನಿಖಾಧಿಕಾರಿಗಳಾದ ಚಾಸಾ 72 ಸತ್ಯನಾರಾಯಣರವರಿಗೆ ವಹಿಸಿದೆ.

**<u>ಪಾಟೀ ಸವಾಲು: ಆರೋಪಿತರ ಪರ ವಕೀಲರಾದ ಶ್ರೀ.ಎನ್.ಟಿ.ಆರ್ ರವರಿಂದ</u>**

7. ನಿಪಿ 6 ರಂತೆ ರಾಮಣ್ಣನವರ ಮೇಲೆ ಸರ್ಚ್ ವಾರಂಟ್ ಜಾರಿ ಮಾಡುವಾಗ ಆತನ ಮನೆ ಬಗ್ಗೆ ದೃಡಪಡಿಸಿಕೊಂಡು ಸರ್ಚ್ ವಾರಂಟ್ ಜಾರಿ ಮಾಡಿದ್ದೆ. ನಾವು ರಾಮಣ್ಣನ ಮನೆ ಸರ್ಚ್ ಮಾಡದೇ ಹೊಸಕೇರಪ್ಪ ಬಿನ್ ಓದವೀರಣ್ಣ ರವರ ಮನೆ ಸರ್ಚ್ ಮಾಡಿದ್ದೆ ಅಂದರೆ ಸರಿಯಲ್ಲ. ನಿಪಿ 52 ರ ಮೇಲೆ ಮೆಸರ್ಸ್ ಕಾಲಂ ಖಾಲಿ ಇದೆ ಅಂದರೆ ಸರಿ. ನಿಪಿ 61 ರ ಮೇಲೆ ಯಾರು

ಪಾವತಿ ಮಾಡಿದ್ದಾರೆ ಅಂತ ಹೆಸರಿಲ್ಲ ಅಂದರೆ ಸರಿ. ನಿಪಿ 51, 52,54,55,57 ರಿಂದ 60 ಈ ಕೇಸಿಗಾಗಿ ಸೃಷ್ಟಿಸಲಾಗಿದೆ ಅಂದರೆ ಸರಿಯಲ್ಲ. ನಾನು ರಾಮಣ್ಣನ ಮನೆಯಲ್ಲಿ ದಾಳಿ ಮಾಡಿ ಯಾವುದೇ ದಾಖಲೆಗಳನ್ನು ವಶಪಡಿಸಿಕೊಂಡಿರಲಿಲ್ಲ ಅಂದರೆ ಸರಿಯಲ್ಲ. ಈ ಕೇಸಿಗಾಗಿ ಪಂಚನಾಮೆಯನ್ನು ಸೃಷ್ಟಿಸಲಾಗಿದೆ ಅಂದರೆ ಸರಿಯಲ್ಲ.

**ಮರು ವಿಚಾರಣೆ ಇಲ್ಲ:**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದ ಮೂಲಕ ಬೆರಳಚ್ಚು ಮಾಡಿಸಲಾಯಿತು)

ಓ. ಹೇ. ಕೇ. ಸರಿ ಇದೆ

(ಎಸ್.ವೈ.ವಟವಟಿ)
ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು
ಚಿತ್ರದುರ್ಗ